

**ಹಲವಾರು ಮಾನಸಿಕ ಸ್ಥಿತಿಗಳ ಅಧ್ಯಯನಗಳು, ಮನಃಶಾಸ್ತ್ರಜ್ಞರು ಹೇಳುವಂತೆ, ಕೌಟುಂಬಿಕ ದೌರ್ಜನ್ಯ ಎಸಗುವ ಗಂಡಸರು ತಮ್ಮನ್ನು ಅಪರಾಧಿ ಎಂದಲ್ಲ, ಬದಲಾಗಿ ತಾವೇ ಪರಿಸ್ಥಿತಿಯ ಬಲಿಪಶುಗಳು ಎಂಬ ತಪ್ಪುಗ್ರಹಿಕೆಯಲ್ಲಿ ಇರುತ್ತಾರೆ.**

ಬೇರೆಯವರಿಗೆ ನೀಡಬಾರದು', 'ನನಗೆ ಒಡವೆ, ಸೀರೆ ತಂದುಕೊಡಬೇಕು', ಎನ್ನುವಂತಹ ನಿರೀಕ್ಷೆಗಳನ್ನು ಇಟ್ಟುಕೊಳ್ಳಲಾರರು.

### ಸಮಾಜ ಹೇರುವ ಕರಾರುಗಳು

ಗಂಡುಮಕ್ಕಳನ್ನು ಬೆಳೆಸುವಾಗ, ಹೊರಗೆ ಹೋಗಿ ದುಡಿಯುವುದು ಮಾತ್ರ ಅವರ ಜವಾಬ್ದಾರಿಯೆಂದೋ, ಮನೆ, ಹೆಂಡತಿ, ಮಕ್ಕಳು ಎಲ್ಲ ತನ್ನಷ್ಟಕ್ಕೆ ಅವರಿಗೆ ಒದಗಿ ಬರುತ್ತವೆ ಎಂದೋ, ಅದಕ್ಕಾಗಿ ಅವರೇನೂ ಮಾಡಬೇಕಿಲ್ಲವೆಂಬಂತೆ ಬಹಳಷ್ಟು ಪೋಷಕರು ಬೆಳೆಸಿರುತ್ತಾರೆ. ಹಾಗಾಗಿ, 'ಹೆಂಡತಿಯನ್ನು ಹದ್ದುಬಸ್ತಿನಲ್ಲಿ ಇಡಬೇಕಾಗುವುದು ತನ್ನ ಹಕ್ಕು, ತನ್ನ ಅರ್ಹತೆ. ಮತ್ತು ಹೆಂಡತಿಯನ್ನು ಬೈದೋ ಹೊಡೆದೋ ಹಿಡಿತದಲ್ಲಿ ಇಟ್ಟುಕೊಳ್ಳಬೇಕಾಗಿ ಬಂದರೆ, ಅದಕ್ಕೆ ಹೆಂಡತಿಯ ತಪ್ಪುನಡತೆಯೇ ಕಾರಣ' ಎಂಬಂತೆ ಇದ್ದುಬಿಡುತ್ತಾರೆ.

ಹಲವಾರು ಮಾನಸಿಕ ಸ್ಥಿತಿಗಳ ಅಧ್ಯಯನಗಳು, ಮನಃಶಾಸ್ತ್ರಜ್ಞರು ಹೇಳುವಂತೆ, ಕೌಟುಂಬಿಕ ದೌರ್ಜನ್ಯ ಎಸಗುವ ಗಂಡಸರು ತಮ್ಮನ್ನು ಅಪರಾಧಿ ಎಂದಲ್ಲ, ಬದಲಾಗಿ ತಾವೇ ಪರಿಸ್ಥಿತಿಯ ಬಲಿಪಶುಗಳು ಎಂಬ ತಪ್ಪುಗ್ರಹಿಕೆಯಲ್ಲಿ ಇರುತ್ತಾರೆ. ಅಂದರೆ, ಇಲ್ಲಿ ತಮ್ಮ ಸುಖಕ್ಕೆ ಅಡ್ಡಿಪಡಿಸಿದ ಹೆಂಡತಿಯನ್ನು, ತನ್ನ ಕರ್ತವ್ಯ ಪಾಲಿಸದ ಹೆಂಡತಿಯನ್ನು ಶಿಕ್ಷಿಸುವುದು ತನ್ನ ಅರ್ಹತೆಯಾಗಿ ಅವರು ಭಾವಿಸುತ್ತಿರುತ್ತಾರೆ. ಈ ಮನಸ್ಥಿತಿಯನ್ನು ಗಂಡಸರಲ್ಲಿ ಬೆಳೆಸಲು ಅವರ ಪೋಷಕರು, ಸಮಾಜವೂ ಕಾರಣವಾಗಿರುತ್ತದೆ. ಇದನ್ನೇ 'ಸಮಾಜ ಹೇರುವ ಕರಾರುಗಳು' (ಸೋಷಿಯಲ್ ಕಂಡೀಶನಿಂಗ್) ಎನ್ನುವುದು.

### ಬದುಕು ಕಟ್ಟಕೊಳ್ಳುವುದು ಮುಖ್ಯ

ಸಂಸಾರದಲ್ಲಿ ಹಿಂಸೆ ಕಂಡುಬಂದಾಗ, ಮಹಿಳೆಯರಾಗಲೀ ಅವರ ಪೋಷಕರಾಗಲೀ, 'ಹಿಂಸೆ ಮಾಡಿದವನಿಗೆ ಬುದ್ಧಿ ಕಲಿಸಬೇಕೆಂದೋ, ಪರಿಹಾರ ಸಿಗಬೇಕೆಂದೋ ಅಥವಾ ಯಾವುದೋ ರೊಚ್ಚಿಗೆ ಸಿಕ್ಕಿ ಹಲವು ವರ್ಷಗಳ ವ್ಯಾಜ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡುಬಿಡುತ್ತಾರೆ. ಆದರೆ, ಹಿಂಸೆಯ ಆ ಸಂಬಂಧದಿಂದ ಹೊರಬಂದು, ತಮ್ಮ ಮುಂದಿನ ಜೀವನ ಕಟ್ಟಿಕೊಳ್ಳಬೇಕಾದ್ದು ಅದಕ್ಕಿಂತಲೂ ಮುಖ್ಯ ಎನ್ನುವುದನ್ನು ಅವರು ಅರ್ಥ ಮಾಡಿಕೊಳ್ಳಬೇಕು.

ಹಿಂಸಾತ್ಮಕ ಸಂಬಂಧವನ್ನು ಉಳಿಸುವುದರಲ್ಲಿ ಯಾವ ಅರ್ಥವೂ ಇಲ್ಲ. ಮಾತ್ರವಲ್ಲ, ಕುಟುಂಬಗಳಲ್ಲಿ ಕಾಣಬರುವ ಹಿಂಸೆ, ಆ ವ್ಯಕ್ತಿಗಳಿಗೆ, ಸಂಸಾರಕ್ಕೆ, ಅವರ ಮಕ್ಕಳಿಗೆ, ಹಾಗೆಯೇ ಸಮಾಜಕ್ಕೂ ಅಪಾಯಕಾರಿ. ಮದುವೆ, ಸಾಂಗತ್ಯ ಎನ್ನುವುದು ನಮ್ಮನ್ನು ಅರಳಿಸಬೇಕಾದ, ಬೆಳೆಸಬೇಕಾದ ಸಂಬಂಧ. ಒಬ್ಬರನ್ನೊಬ್ಬರು ಅರಿತು, ಪೋಷಿಸಬೇಕಾದ ಸಂಬಂಧ. ಆದರೆ, ಈ ರೀತಿಯ ಹಿಂಸೆ, ಕ್ರೌರ್ಯಗಳು ಮನೆಯೊಳಗೆ, ಸಂಬಂಧದಲ್ಲಿ ಕಂಡುಬಂದಾಗ ಅಲ್ಲಿ ಸಾಂಗತ್ಯವೆನ್ನುವುದಕ್ಕೆ ಯಾವ ಅರ್ಥವೂ ಉಳಿದಿರುವುದಿಲ್ಲ. ಮನೆಯೊಳಗೇ ಹಿಂಸಾಚಾರಗಳು ನಡೆದರೆ ಅದರಷ್ಟು ದೊಡ್ಡ ಅಪರಾಧ ಇನ್ನೊಂದಿಲ್ಲ. ಇದೊಂದು ಸರಳ, ಮಾನವೀಯ ಸತ್ಯ.

ನಮ್ಮ ಸಮಾಜ, ಕುಟುಂಬ, ಮದುವೆ ಎಲ್ಲ ರೀತಿಯ ವ್ಯವಸ್ಥೆಗಳ ಮೂಲ ಆಶಯದಲ್ಲಿ ಇರುವುದೂ ಗಂಡು ಹೆಣ್ಣು ಇಬ್ಬರೂ ಗೌರವಯುತವಾಗಿ, ಸುರಕ್ಷಿತವಾಗಿ ಬದುಕಲು ಅಗತ್ಯ ವಾತಾವರಣ ಕಲ್ಪಿಸಿಕೊಡುವುದೇ ಆಗಿದೆ. ಇದನ್ನು ಅರಿತಾಗ, ಅದಕ್ಕೆ ಪೂರಕವಾದ ಕಾನೂನು ವ್ಯವಸ್ಥೆಯೂ ರೂಪುಗೊಂಡಾಗ ನಮ್ಮ ಸಮಾಜ ನಿಜವಾಗಿಯೂ 'ಸ್ವಸ್ಥ ಸಮಾಜ'ವಾಗುತ್ತದೆ. ಆದರೆ ಆ ದಿನಗಳು ಬರುವ ಸುಳಿವು ಸದ್ಯಕ್ಕಂತೂ ಕಾಣಿಸುತ್ತಿಲ್ಲ.

ಪ್ರತಿಕ್ರಿಯಿಸಿ: feedback@sudha.co.in

